ಮೈಸೂರಿನ ಸಿ.ಎಫ್.ಟಿ.ಆರ್.ಐ. ಆವರಣದಲ್ಲಿ ಕೊಳವೆಗಳನ್ನು ಅಳವಡಿಸಲು ಅನುಮತಿ

89(422) ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. 8ಎಂ.ಬಿ.ಡಿ. ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಸಿ.ಎಫ್.ಜಿ.ಆರ್.ಐ. ಮೂಲಕ ಕೊಳವೆಗಳನ್ನು ಅಳವಡಿಸಲು ಕಾಮಗಾರಿ ವಿಳಂಬವಾಗುತ್ತಿರಲು ಕಾರಣವೇನು?

2. ಸಿ.ಎಫ್.ಟಿ.ಆರ್.ಐ.ನವರು ಕಾಂಪೌಂಡ್ ಒಳಭಾಗದಲ್ಲಿ ಕೊಳವೆ ಅಳವಡಿಸಲು ಅನುಮತಿ ನೀಡಿರುವರೇ? ನೀಡಿದ್ದರೆ ಯಾವ ದಿನಾಂಕದಂದು ನೀಡಿದ್ದಾರೆ?

3. ಈಗಾಗಲೇ ಅನುಮತಿ ನೀಡಿದ್ದಲ್ಲಿ ಕಾಮಗಾರಿ ಪ್ರಾರಂಭಿಸದಿರಲು ಕಾರಣವೇನು? ಇದನ್ನು ತಕ್ಷಣ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :—

1. ಸಿ.ಎಫ್.ಟಿ.ಆರ್.ಐ. ಆಡಳಿತ ನಿಯಂತ್ರಕರು ಸಿ.ಎಫ್.ಟಿ.ಆರ್.ಐ. ಆವರಣದಲ್ಲಿ ಕೊಳವೆಗಳನ್ನು ಅಳವಡಿಸಲು ಅನುಮತಿ ನೀಡಲು ವಿಳಂಬ ಮಾಡಿದುದರಿಂದ ಕಾಮಗಾರಿ ಪ್ರಾರಂಭಿಸಲು ವಿಳಂಬವಾಗಿರುತ್ತದೆ.

2. ದಿನಾಂಕ: 29.1.99ರಂದು ಸಿ.ಎಫ್.ಟಿ.ಆರ್.ಐ.ನವರು ಕೆಲವು ನಿಬಂಧನೆ-ಗೊಳಪಟ್ಟು ಕಾಂಪೌಂಡ್ ಒಳಭಾಗದಿಂದ ಕೊಳವೆ ಅಳವಡಿಸಲು ಅನುಮತಿ ನೀಡಿರುತ್ತಾರೆ.

3. ಈ ಕಾಮಗಾರಿಗೆ ಗುತ್ತಿಗೆದಾರರನ್ನು ನೇಮಿಸಿರುವ ಕಾಮಗಾರಿಗೆ ಬೇಕಾಗುವ ಎಂ.ಎಸ್. ಪೈಪುಗಳನ್ನು ಒದಗಿಸಲಾಗಿದೆ. ಕಾಮಗಾರಿಯನ್ನು ಬೇಗ ಮುಗಿಸುವ ಉದ್ದೇಶದಿಂದ ಟ್ರೆಂಡ್ ತೆಗೆಯಲು ಕೆಲಸಗಾರರ ಮೂಲಕ ಮಾಡುವ ಬದಲು ಯಂತ್ರಗಳನ್ನು ಉಪಯೋಗಿಸಲು ಸಿ.ಎಫ್.ಟಿ.ಆರ್.ಐ. ಅವರ ಅನುಮತಿ ಕೋರಲಾಗಿದೆ. ಈ ಕೆಲಸವನ್ನು ಆದಷ್ಟು ಬೇಗ ಮುಗಿಸಲಾಗುವುದು.

ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆಗಳ ಡಾಂಬರೀಕರಣ.

90(421) ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?